**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ತಿ.ನರಸೀಪುರ.**

**ಸಿ ಸಿ ನಂ.3958/2022**

| | | |
|---|---|---|
| ಸಾಕ್ಷಿದಾರರ ಹೆಸರುಃ | ಎಸ್.ಎಸ್. ಶಂಕರ್ | ಸಿ ಡಬ್ಲ್ಯೂಃ 2 |
| ತಂದೆಯ ಹೆಸರುಃ | ಲೇಟ್ ಶ್ರೀನಿವಾಸ | ಪಿ ಡಬ್ಲ್ಯೂಃ 1 |
| ವಯಸ್ಸುಃ | 40 ವರ್ಷ | |
| ಉದ್ಯೋಗಃ | ಮುಖ್ಯಪೇದೆ ಬನ್ನೂರು ಪೊಲೀಸ ಠಾಣೆ | ಪ್ರ.ವ .ಬೋ.ದಿಃ |
| ವಾಸಸ್ಥಳಃ | ಬನ್ನೂರು | **19.12.2023** |

**ಮುಖ್ಯ ವಿಚಾರಣೆಃ** ಮಾನ್ಯ **ಎಪಿಪಿ** ರವರಿಂದಃ

ನಾನು ದಿನಾಂಕ 02.01.2019 ರಿಂದ 26.06.2022 ರವರೆಗೆ ಪೇದೆಯಾಗಿ ನಂತರ ದಿನಾಂಕ 30.06.2022 ರಿಂದ ಬನ್ನೂರು ಪೊಲೀಸ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 26.02.2022 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ನಾನು ಚಾಸಾ-1 ರವರೊಂದಿಗೆ ನಮ್ಮ ಇಲಾಖಾ ದ್ವಿಚಕ್ರ ವಾಹನ ಸಂ.ಕೆಎ-55-ಜಿ-104 ರಲ್ಲಿ ಹೆಗ್ಗೂರು-ಕಟ್ಟೆಕೊಪ್ಪಲು ಕಡೆ ಗಸ್ತಿಗೆ ಹೋಗಿರುತ್ತೇವೆ. ಆ ಸಮಯದಲ್ಲಿ ಚಾಸಾ-1 ರವರಿಗೆ ಬಾತ್ಮೀದಾರರು ಮೈಸೂರು-ಮಳವಳ್ಳಿ ಮುಖ್ಯ ರಸ್ತೆಯ ಮಲಿಯೂಗು ಗೇಟಿನಿಂದ ಮಲಿಯೂರು ಗ್ರಾಮಕ್ಕೆ ಒಬ್ಬ ವ್ಯಕ್ತಿಯು ಪ್ಲಾಸ್ಟಿಕ ಬ್ಯಾಗಿನಲ್ಲಿ ಮದ್ಯವನ್ನು ತೆಗೆದುಕೊಂಡು ಹೋಗುತ್ತಿದ್ದೇನೆ ಎಂದು ಮಾಹಿತಿ ನೀಡಿದ್ದು, ಆ ನಂತರ ನಾನು ಹಾಗೂ ಚಾಸಾ-1 ರವರು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಮಲಿಯೂರು ಗೇಟ್ ಬಳಿ ಬಂದು ನೋಡಲಾಗಿ ಒಬ್ಬ ವ್ಯಕ್ತಿಯು ಪ್ಲಾಸ್ಟಿಕ ಬ್ಯಾಗಿನಲ್ಲಿ ಮದ್ಯವನ್ನು ತೆಗೆದುಕೊಂಡು ಹೋಗುತ್ತಿರುವುದು ಕಂಡು ಬಂದಿರುತ್ತದೆ. ಸದರಿ ವ್ಯಕ್ತಿಯನ್ನು ಹಿಡಿದು ಆತನನ್ನು ವಿಚಾರಣೆ

ಮಾಡಲಾಗಿ ಆತನು ತನ್ನ ಹೆಸರು ಕೆ.ಎನ್ ಮೂರ್ತಿ ತಂದೆ ಲೇಟ್ ಸಿ.ಕೆಂಚೇಗೌಡ ಎಂದು ತಿಳಿಸಿರುತ್ತಾನೆ. ನಂತರ ಸ್ಥಳಕ್ಕೆ ಪಂಚರನ್ನು ಬರಮಾಡಿಕೊಂಡು ಪಂಚರಿಗೆ ಬಾತ್ಮೀದಾರರು ನೀಡಿರುವ ಮಾಹಿತಿಯನ್ನು ತಿಳಿಸಿ, ಅವರ ಸಮಕ್ಷಮ ಸದರಿ ವ್ಯಕ್ತಿಯ ವಶದಲ್ಲಿದ್ದ ಪ್ಲಾಸ್ಟಿಕ ಚೀಲವನ್ನು ನೋಡಲಾಗಿ ಅದರಲ್ಲಿ 180 ಎಂ.ಎಲ್ ಆ್ಯಡ್ಮಿರಲ್ ಕಂಪನಿಗೆ ಸೇರಿದ 29 ಬ್ರ್ಯಾಂಡಿ ಇರುವ ಪೌಚಗಳು ಕಂಡು ಬಂದಿರುತ್ತವೆ. ಮದ್ಯ ಸಾಗಣಿಕೆ ಮಾಡುವ ಬಾಬ್ತು ಪರವಾನಿಗೆ ಇರುವ ಬಗ್ಗೆ ವಿಚಾರಿಸಲಾಗಿ ಆತನು ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿರುತ್ತಾನೆ. ಸದರಿ ವ್ಯಕ್ತಿಯನ್ನು ಮದ್ಯ ತೆಗೆದುಕೊಂಡ ಬಂದ ಬಗ್ಗೆ ವಿಚಾರಿಸಲಾಗಿ ಆತನು ಬನ್ನೂರು ಪಟ್ಟಣದ ಶ್ರೀನಿವಾಸ ವೈನ್ಸ ಸ್ಟೋರ್ ನಿಂದ ಮದ್ಯವನ್ನು ತಂದು ಮಾರಾಟ ಮಾಡಲು ಹೋಗುತ್ತಿರುವುದಾಗಿ ತಿಳಿಸಿರುತ್ತಾನೆ. ಪಂಚರ ಸಮಕ್ಷಮ ಸದರಿ ಮದ್ಯದ ಪೌಚಗಳನ್ನು ಮಧ್ಯಾಹ್ನ 3.30 ರಿಂದ 4.30 ವರೆಗೆ ಪಂಚನಾಮೆ ಮಾಡಿ ಜಪ್ತು ಪಡಿಸಿಕೊಳ್ಳಲಾಯಿತು. ಸದರಿ ಮದ್ಯದ ಪೌಚಗಳಲ್ಲಿ 15 ಮದ್ಯದ ಪೌಚಗಳನ್ನು ರಾಸಾಯನಿಕ ಪರೀಕ್ಷೆಯ ಮಾದರಿಗಾಗಿ ತೆಗೆದುಕೊಳ್ಳಲಾಯಿತು. ಉಳಿದ 14 ಮದ್ಯದ ಪೌಚಗಳನ್ನು ಪ್ರತ್ಯೇಕ ಡಬ್ಬಿಯಲ್ಲಿ ಹಾಕಿ ಇಡಲಾಯಿತು. ಸಂಜೆ 5.00 ಗಂಟೆ ಸಮಯದಲ್ಲಿ ಆರೋಪಿ ಹಾಗೂ ಮುದ್ದೆಮಾಲುಗಳೊಡನೆ ಠಾಣೆಗೆ ಹಾಜರಾಗಿದ್ದು, ಚಾಸಾ-1 ರವರು ಠಾಣಾಧಿಕಾರಿಗೆ ಒಂದು ಸ್ವವರದಿಯನ್ನು ತಯಾರಿಸಿ ನೀಡಿರುತ್ತಾರೆ.

ದಿನಾಂಕ 11.03.2022 ರಂದು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡ ಮಾದರಿ ಮದ್ಯದ ಪೌಚಗಳನ್ನು ಮೈಸೂರಿನ ಆರ್.ಎಫ್.ಎಸ್.ಎಲ್ ಗೆ ತೆಗೆದುಕೊಂಡು ಹೋಗಿ ನೀಡಿದ್ದು, ಅದನ್ನು ನೀಡಿದ ಬಾಬ್ತು ಸ್ವೀಕೃತಿಯನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ.

ಸಾಕ್ಷಿಯು ಕೃತ್ಯ ಸ್ಥಳ ಹಾಗೂ ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ-1** ಎಂದು, ಸಾಕ್ಷಿಯ ಸಹಿಯನ್ನು **ನಿಪಿ-1 ಎ** ಎಂದು, ಜಪ್ತುಪಡಿಸಿಕೊಂಡ ಮದ್ಯದ ಪೌಚಗಳ ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು **ನಿಪಿ-2** ಮತ್ತು **ನಿಪಿ-3** ಎಂದು ಗುರುತಿಸಲಾಯಿತು. ಸಾಕ್ಷಿಯು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡ ಹೋದ ಮದ್ಯದ ಪೌಚಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಎಂ.ಓ-1 ರಿಂದ 15

ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ **ಕೆ.ಎಂ.ಯು** ವಕೀಲರಿಂದಃ

ನಾವು ಗಸ್ತಿಗೆ ಹೋದ ಬಾಬ್ತು ಚಾಸಾ-1 ರವರು ಠಾಣಾ ದಿನಚರಿಯಲ್ಲಿ ನಮೂದು ಮಾಡುತ್ತಾರೆ. ಠಾಣಾ ದಿನಚರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಠಾಣೆಯಿಂದ ಗಸ್ತಿಗಾಗಿ ಮಧ್ಯಾಹ್ನ 3.00 ಗಂಟೆಗೆ ಹೊರಟಿರುತ್ತೇವೆ. ಠಾಣೆಯಿಂದ ಕಟ್ಟೆಕೊಪ್ಪಲು ಹಾಗೂ ಹೆಗ್ಗೂರಿಗೆ ಸುಮಾರು 15 ನಿಮಿಷದಲ್ಲಿ ಹೋಗಿರುತ್ತೇವೆ. ಹೆಗ್ಗೂರು ಗ್ರಾಮದಲ್ಲಿ ಸುಮಾರು 5 ನಿಮಿಷಗಳ ಕಾಲ ಇದ್ದೆವು. ಗಸ್ತಿನ ಕಾಲದಲ್ಲಿ ನಾವು ಯಾವುದೇ ವಾಹನವನ್ನು ತಪಾಸಣೆ ಮಾಡಿರುವುದಿಲ್ಲ. ನಾನು ಹಾಗೂ ಚಾಸಾ-1 ರವರು ಆರೋಪಿಯನ್ನು ತಡೆದಿರುತ್ತೇವೆ. ಸದರಿ ಜಾಗದಲ್ಲಿ ಆರೋಪಿ ಒಬ್ಬರೇ ಪ್ಲಾಸ್ಟಿಕ ಬ್ಯಾಗವನ್ನು ಹಿಡಿದುಕೊಂಡು ಹೋಗುತ್ತಿದ್ದರು.

ಪಂಚರ ಹೆಸರು ಬಿ.ಪಿ ಅಶೋಕ ಬಿನ್ ಪುಟ್ಟಸ್ವಾಮಿ, ತ್ಯಾಗರಾಜಮೊಹಲ್ಲಾ, ಬನ್ನೂರು ಪಟ್ಟಣ ಹಾಗೂ ಶಿವಕುಮಾರ ಜಿ.ಎಸ್ ಬಿನ್ ಶಿವಣ್ಣ, ಬನ್ನೂರು ಪಟ್ಟಣದವರಾಗಿರುತ್ತಾರೆ. ಸದರಿಯವರನ್ನು ಬನ್ನೂರುನಿಂದ ಕರೆದುಕೊಂಡು ಬಂದಿರುವುದಿಲ್ಲ. ಪಂಚರನ್ನು ಚಾಸಾ-1 ರವರು ಕರೆಸಿರುತ್ತಾರೆ. ಆರೋಪಿಯನ್ನು ಮಧ್ಯಾಹ್ನ 3.35 ರಿಂದ 3.40 ಗಂಟೆ ಸಮಯದವರೆಗೆ ಶೋಧನೆ ಮಾಡಿರುತ್ತೇವೆ. ಎಂ.ಓ-1 ರಿಂದ 15 ಮದ್ಯದ ಪೌಚಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಎಂ.ಓ-1 ರಿಂದ 15 ಮದ್ಯದ ಪೌಚಗಳನ್ನು ಗುರುತಿಸಲು ವಿಶೇಷ ಗುರುತು ಮಾಡಿಕೊಂಡಿರುವುದಿಲ್ಲ.

ನಾನು ಹಾಗೂ ಚಾಸಾ-1 ಯಾವುದೇ ದಾಳಿ ಮಾಡಿರುವುದಿಲ್ಲ ಹಾಗೂ ನಾನು ಚಾಸಾ-1 ರವರು ನೀಡಿರುವ ದೂರಿಗೆ ಅನುಗುಣವಾಗಿ ದಾಳಿಗೆ ಹೋಗದಿದ್ದರೂ ಹೋಗಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೃತ್ಯ ಸ್ಥಳದಲ್ಲಿ ಪಂಚನಾಮೆ ಮಾಡಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದರೆ

ಸರಿಯಲ್ಲ. ನನ್ನ ಹೇಳಿಕೆಯನ್ನು ನಾನು ಪೊಲೀಸ ಠಾಣೆಯಲ್ಲಿ ತನಿಖಾಧಿಕಾರಿಗೆ ನೀಡಿರುತ್ತೇನೆ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ತಿ.ನರಸೀಪುರ.**